ನಿರಾಕರಣೆಯನ್ನು ಎದುರಿಗೆ ಗಟ್ಟಿಯಾಗಿ ಹೇಳುತ್ತಿದ್ದ. ಒಂದು ವೇಳೆ ಹೇಳುವುದಿದ್ದರೆ ಹೇಳಲಿ... ಆದರೆ ಹೀಗಲ್ಲ. ದೂಳು ತಿನ್ನಿಸಲಿ ಮಸಿ ಉಣಿಸಲಿ ಅಮ್ಮ ಏನು ಮಾಡಿದರೂ ದೂರದಿರುವ ಶೌಕತ್ ಈಗ ಟೀಕಿಸುತ್ತಿದ್ದ. ಅವಳ ಬಳಿ ಒಳ್ಳೆಯ ಸೀರೆ ಇರದುದಕ್ಕೆ ಕೊಳೆಯಾದ ಸೀರೆ ಉಟ್ಟಿದ್ದಾಳೆಂದು ಅವನಿಗೂ ಗೊತ್ತು. ತನ್ನ ತಮ್ಮಂದಿರು ಹೇಗೆ ಬದುಕುತ್ತಿದ್ದರೆಂಬುದೂ ತಿಳಿದಿತ್ತು. ವೃದ್ಧ ತಂದೆಯ ಪಿಂಚಣಿ ಸಾಕಾಗುತ್ತಿರಲಿಲ್ಲ, ಹಣ ಹೊಂದಿಸಲು ಖಾಸಗಿ ಟ್ಯೂಷನ್ ಮಾಡಿ ಬಡಪಾಯಿ ತಂದೆ ಬಸವಳಿದು ಹೋಗಿದ್ದ. ಶೌಕತ್‌ನಿಗೆ ಎಲ್ಲವೂ ತಿಳಿದಿತ್ತಾದರೂ ತಾಯಿಗೆ ಕಟುವಾಗಿ ಮಾತನಾಡುವುದು ಸಾಧ್ಯವಾಗಿತ್ತು. ಹೊಗೆಬಂದು ಸಿಟ್ಟಿನ ಬೆಂಕಿ ಹೊತ್ತಿಕೊಂಡರೂ ಆತಂಕದಿಂದ ಸುಮ್ಮನಿದ್ದಳು.

ದಿಂಬಿನ ಕೆಳಗಿಟ್ಟ ಅಂಗಿಯನ್ನು ಶೌಕತ್ ದಿಟ್ಟಿಸಿದ. ಗಂಜಿ ಹಾಕಿ ಒಗೆದು ನೆರಿಗೆ ತುಂಬಿ ದೋಭಿ ಒಗೆದಂತೆ ಕಾಣುತ್ತಿತ್ತು. ಕರೆಂಟಿನ ಇಸ್ತ್ರಿ ಪೆಟ್ಟಿಗೆ ಕೊಳ್ಳುವುದು ಹೇಗೂ ಅಸಾಧ್ಯ, ಕನಿಷ್ಠ ಇದ್ದಲಿನದು ಇದ್ದಿದ್ದರೂ ತನ್ನ ಬಟ್ಟೆಗಳನ್ನು ತಾನೇ ಇಸ್ತ್ರಿ ಮಾಡಿಕೊಂಡು ಹೊರಗೆ ಹೋಗಬಹುದಿತ್ತು. ಸ್ವಂತ ಹಣ ಇಲ್ಲದೆ ಅಪ್ಪನಿಂದ ಬೇಡುತ್ತಿರುವುದು ಸಾಧ್ಯವಿರಲಿಲ್ಲ. ತಾನೇ ತೊಳೆಯುವುದೇ ದಾರಿಯಾಗಿತ್ತು. ಅದೃಷ್ಟಕ್ಕೆ ಪ್ಯಾಂಟುಗಳನ್ನು ತೊಳೆಯಲು ನೀಡಬಹುದಾಗಿತ್ತು. ಇಲ್ಲದಿದ್ದರೆ ಬೆರ್ಚಪ್ಪನ ತರಹ ಕಾಣಿಸಿ ಹೊರಗೆ ಹೋಗುವುದೇ ಅಸಾಧ್ಯ ಆಗುತ್ತಿತ್ತು. ಕೆಲಸ ಹುಡುಕುವುದೆಂದರೆ ಪ್ರಮುಖ, 'ಸಾಹೇಬರು'ಗಳನ್ನು ಆಯಕಟ್ಟಿನ ಜಾಗದಲ್ಲಿ ಭೇಟಿಯಾಗುವುದಾಗಿತ್ತು. ಬೆದರಿಸುವ ರೂಪದಲ್ಲಿ ಹೋಗುವುದು ಸಾಧ್ಯವೇ ಇರಲಿಲ್ಲ. ಜನರು ಏನೆಂದಾರು! ಅಪ್ಪ ಮುದುಕ, ಅಮ್ಮ ಮನೆಯಲ್ಲೇ ಇರುವವಳು, ತಮ್ಮಂದಿರಿನ್ನೂ ಎಳೆಯವರು. ಅವರೆಲ್ಲ ದರಿದ್ರರಂತೆ ಕಾಣಿಸಿದರೆ ನಷ್ಟ ಇಲ್ಲ. ಆದರೆ ಅತಿಥಿಗಳು ಮನೆಗೆ ಬಂದಾಗ ತಮ್ಮಂದಿರು ಹರಿದ ಅಂಗಿಯಲ್ಲಿ, ಅಪ್ಪ ಹೊಲಸು ಕೋಟಿನಲ್ಲಿ ಇರುವುದು ತನಗೇ ಅವಮಾನವಾದಂತೆ ಅವನಿಗೆ ನಾಚಿಗೆಯಾಗುತ್ತಿತ್ತು ಸಿಟ್ಟೂ ಬರುತ್ತಿತ್ತು. ಅಮ್ಮನಿಗೆ ಎಷ್ಟು ಸಲ ಹೇಳಿದರೂ ತಮ್ಮಂದಿರು ಜಗುಲಿಗೆ ಓಡಿಕೊಂಡು, ಬಂದವರ ಎದುರಿಗೆ ನಿಲ್ಲುತ್ತಿದ್ದರು. ಅಪ್ಪ ಇನ್ನಷ್ಟು ಕಾಣಿಸಿಕೊಳ್ಳದಿರುವುದು ಸಾಧ್ಯ ಇರಲಿಲ್ಲವೇ? ಕುಟುಂಬದ ದಾರಿದ್ರ್ಯವನ್ನು ಇತರರೆದುರು ಮೆರವಣಿಗೆ ಮಾಡಿಸಿ ಅವನಿಗೆ ಏನು ಸಿಗುತ್ತಿತ್ತು?

ಶೌಕತ್‌ನಿಗೆ ಸುಂದರ ಕನಸು ವೇಗದಲ್ಲಿ ಮರೆಯಾಗುತ್ತಿದೆ, ಮನೆಯ ಸಾವಿರಾರು ಸಮಸ್ಯೆಗಳಲ್ಲಿ ತನ್ನ ಗುರುತೇ ಸವೆದು ಹೋಗುತ್ತಿದೆ ಎಂದು ಅನಿಸಲಾರಂಭಿಸಿತ್ತು. ಬಹುಶಃ ಇದೇ ಎಲ್ಲವನ್ನೂ ಅಸಹನೀಯಗೊಳಿಸಿತ್ತು.

ಪುತುಲ್ ಬಾಗಿಲ ಬಳಿ ಪ್ರತ್ಯಕ್ಷ ಆದಳು. ಯಾರನ್ನು ಹುಡುಕಿ ಬಂದೆ ಎಂದು ಕೇಳಿದ. ನಕ್ಕಳು. 'ಅಮ್ಮ ಇಲಿಶ್ ಮೀನನ್ನು ನಿನಗಿಷ್ಟ ಆಗುವ ಹಾಗೆ ಪದಾರ್ಥ ಮಾಡಿ ಕಳುಹಿಸಿದ್ದಾಳೆ. ದೊಡ್ಡಮ್ಮ ಎಲ್ಲಿ?' ಕೇಳಿ ಓಡಿಹೋದಳು.

ಶೌಕತ್ ನೆಟ್ಟಗೆ ಕುಳಿತ. ತಲೆ ಬಾಗಿತ್ತು. ಅವನ ಜಗತ್ತೇ ಇಂತಹ ಅಹಿತಕರ ಔಪಚಾರಿಕತೆಗಳಿಂದ ತುಂಬಿತ್ತು. ಒಮ್ಮೆ ಕೆಲಸ ಸಿಕ್ಕಿದರೆ ಇಲ್ಲಿಂದ ದೂರ ಹೋಗುತ್ತಿದ್ದ , ಆದರೆ ಕೆಲಸ ಸಿಗುತ್ತದೆಯೇ?

ಗಂಟೆಯ ನಂತರ ಚಪ್ಪಲಿಯ ಸದ್ದು ಕೇಳಿಸಿತು, ತಂದೆ ಕೋಣೆಗೆ ಬಂದರು.

'ಹಾಂ ಅಪ್ಪಾ?' ಶೌಕತ್ ಕೇಳಿದ

ಹಿಂಜರಿಕೆಯಲ್ಲಿ ತಂದೆ ಕೇಳಿದರು, 'ಹೊರಗೆ ಹೋಗುತ್ತೀಯಾ ಈಗ?'

'ಯಾಕೆ?' ರೇಗಿದ ಧ್ವನಿಯಲ್ಲಿ. 'ರೇಷನ್ ತರಬಹುದು. ಮಕ್ಕಳು ಶಾಲೆಗೆ ಹೋಗಿದ್ದಾರೆ ನಾನು ಟ್ಯೂಷನ್ ಸಂಬಳ ತರಲು ಹೋಗಬೇಕು. ನಿನ್ನ ಹುದ್ದೆ ಖಾತ್ರಿ ಆದ ಮೇಲೆ ಸಿಹಿಸುದ್ದಿ ಆಚರಿಸಲು ಮಕ್ಕಳಿಗೆ ಸಿಹಿತಿಂಡಿ ತರಬೇಕು. ಸಾಧ್ಯ ಆದರೆ...'

ಶೌಕತ್ ಅಲ್ಲಿಗೇ ಮಾತು ತುಂಡರಿಸಿ, 'ಹಾಗಾದರೆ ರೇಷನ್ ತರಬೇಕು. ಸರಿ'

ತಂದೆ ಶೌಕತ್‌ನ ಬದಲಾದ ವೈಖರಿಯನ್ನು ಗಮನಿಸಲಿಲ್ಲವೋ ಅಥವಾ ನಿರ್ಲಕ್ಷಿಸಿದನೋ. ಒಂದು ಕ್ಷಣ ಬಿಟ್ಟು, 'ಫಮಾನುಲ್ಲಾ ಸಾಹೇಬರ ಮನೆಗೆ ನೀನ್ಯಾಕೆ ನನ್ನ ಜೊತೆ ಬರಬಾರದು? ಅವರಿಗೆ ನಿನ್ನ ಮ್ಯಾನೇಜರ್ ಗೊತ್ತು. ಒಂದು ಮಾತು ಹೇಳಿಸಿದರೆ ಕೆಲಸ ನಿನಗೇ... ಹೋಗಿಬರೋಣ?' ಶೌಕತ್ ಉತ್ತರಿಸಲಿಲ್ಲ. ಹೋಗುವುದು ಖಂಡಿತ ಇಷ್ಟ ಇರಲಿಲ್ಲ. ಅಪ್ಪ ಹಿಂಜರಿಕೆಯಲ್ಲಿಯೇ, 'ನನ್ನೊಡನೆ ಬರುವುದಕ್ಕೆ